# ಶ್ರೀಕೃಷ್ಣ ಮಿಲ್ಕ್ಸ್ ರಜತ ಮಹೋತ್ಸವ ಆಚರಣೆ

ಯಲ್ಲಾಪುರ, ಜು.13: ತಾಲೂಕಿನ ಕಿರವತ್ತಿಯಲ್ಲಿರುವ ಶ್ರೀಕೃಷ್ಣ ಮಿಲ್ಕ್ಸ್‌ಗೆ 25 ವರ್ಷಗಳು ತುಂಬಿದ ಸಂತಸದಲ್ಲಿ ಮೊನ್ನೆ ಹುಬ್ಬಳ್ಳಿಯ ಹೊಟೆಲ್ ಡೆನಿಸನ್ಸ್‌ನಲ್ಲಿ ವಿಜೃಂಭಣೆಯಿಂದ ರಜತ ಮಹೋತ್ಸವ ಆಚರಿಸಲಾಯಿತು.

ಈ ಸಮಾರಂಭದಲ್ಲಿ ಅನೇಕ ಗಣ್ಯರು, ಶ್ರೀ ಕೃಷ್ಣ ಮಿಲ್ಕ್ಸ್ ಸಂಸ್ಥೆಯ ಸಿಬ್ಬಂದಿಗಳು, ಹಾಲು ವಿತರಕರು, ರಿಟೇಲರ್‌ಗಳು ಪಾಲ್ಗೊಂಡಿದ್ದರು.

ಈ ಸಮಾರಂಭದಲ್ಲಿ ಸಂಸ್ಥೆಯ ನೂತನ ಉತ್ಪಾದನೆಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಯಿತು.

1989 ರಲ್ಲಿ ಶ್ರೀ ಕೃಷ್ಣ ಮಿಲ್ಕ್ಸ್‌ನ್ನು ಕಿರವತ್ತಿಯಲ್ಲಿ ಆರಂಭಿಸುವ ಮೂಲಕ ಸ್ಥಾನಿಕ ಹಾಲು ಉತ್ಪಾದಕರಿಗೆ ಮಾರುಕಟ್ಟೆಯಾಗಿ ನೆರವಿಗೆ ಬಂದರು. ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುತ್ತ ಮಾರುಕಟ್ಟೆಯಲ್ಲಿ ಗ್ರಾಹಕರ ವಿಶ್ವಾಸ ಉಳಿಸಿಕೊಂಡು



ಸ್ಪರ್ಧೆಯನ್ನು ಎದುರಿಸಿ 25 ವರ್ಷಗಳನ್ನು ಪೂರೈಸಿ ಜಿಲ್ಲೆಯ ಹೆಮ್ಮೆಯ ಉದ್ದಿಮೆಯಾಗಿ ಪರಿವರ್ತನೆಯಾಯಿತು.

ಈ ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಪ್ರದೀಪ ಪೈ, ದಿನೇಶ್ ಆರ್. ಪೈ, ಮುಖ್ಯ ಅತಿಥಿಯಾಗಿ ವಿವೇಕ ಪವಾರ (ಐ.ಟಿ.ಉದ್ಯಮಿ), ಶ್ಯಾಮ್ ಕಾಮತ್, ಹನುಮಂತ ಎಂ. ಪೈ, ಮಹೇಶ ಕಾಮತ ಮೊದಲಾದವರು ಪಾಲ್ಗೊಂಡಿದ್ದರು.